# ಸ್ವಾಮಿ ವಿವೇಕಾನಂದರು ಮತ್ತು ಉಪನಿಷತ್ತುಗಳು

ಪ್ರೊ. ರಾಮಚಂದ್ರಸ್ವಾಮಿ

ಭಾರತೀಯ ಸಂಸ್ಕೃತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ವಿವೇಕಾನಂದರೇ ಸಮರ್ಪಕ ಕೈಗನ್ನಡಿ. ಉಪನಿಷತ್ತುಗಳ ಸಾರಾಂಶವನ್ನೇ ತಿಳಿಸುವ ಈ ಲೇಖನದಲ್ಲಿ ವಿವೇಕಾನಂದರು ತಮ್ಮ ಪ್ರಖರ ವಿಚಾರಗಳಿಂದ ಅಪ್ಯಾಯಮಾನರಾಗುತ್ತಾರೆ. ಶೃಂಗೇರಿಯ ನಿವಾಸಿಗಳಾದ ಲೇಖಕರು ಅನೇಕ ಗ್ರಂಥಗಳನ್ನು, ಅನುವಾದಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದ ಸ್ವಾಮಿ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು.

ಭಗವದ್ಗೀತೆಗೆ ಪ್ರಾಮುಖ್ಯತೆ ಕೊಟ್ಟ ವಿವೇಕಾನಂದರು ಅದನ್ನು ಉಪನಿಷತ್ತುಗಳ ಮೇಲಣ ಅತ್ಯುತ್ತಮ ಭಾಷ್ಯವೆಂದು ಪರಿಗಣಿಸಿದರು. ಕೃಷ್ಣನಿಂದ ಬೋಧಿಸಲ್ಪಟ್ಟ ಅದನ್ನು ಅವರು 'ಶ್ರುತಿ' ಎಂದೇ ಪರಿಗಣಿಸಿದರು. ಪರಂಪರೆಯಲ್ಲಿನ ವಿವೇಕದ ಬೆಳಕನ್ನು ತಮ್ಮ ವೈಚಾರಿಕತೆಯ ಮೂಲಕ ನವೀಕರಿಸಿ ಅದರಿಂದ ನಮ್ಮ ಜನರ ಮೌಢ್ಯವನ್ನು ಪರಿಹರಿಸುವ ಅವರ ಪ್ರಯತ್ನವನ್ನು ನಾವಿಲ್ಲಿ ಗಮನಿಸಬೇಕು. ಯಾವುದೇ ಶ್ರುತಿಗೂ, ಶಾಸ್ತ್ರಗ್ರಂಥಕ್ಕೂ ಅವರು ಹೊಸ ಭಾಷ್ಯ ಬರೆಯಲು ಹೊರಡಲಿಲ್ಲ, ಗ್ರಂಥಗಳಲ್ಲಿ ಉಕ್ತವಾದ ಮಾತುಗಳನ್ನು ತೆಗೆದುಕೊಂಡು ಹೊಸೆಯಹೊರಡಲಿಲ್ಲ; ಅವರ ಏಕೈಕ ಗುರಿ ಭಾರತೀಯರ, ಏಕೆ ಪ್ರಪಂಚದ ಎಲ್ಲ ಮಾನವರ ನೈತಿಕ, ಆಧ್ಯಾತ್ಮಿಕ ಪುನರುಜ್ಜೀವನ ಮಾತ್ರವೇ ಆಗಿದ್ದಿತು. ಅವರು ಹೇಳಹೊರಟ ಸಂದೇಶದಲ್ಲಿ ನಮ್ಮ ಪ್ರಾಚೀನ ಸಂಪ್ರದಾಯಗಳಲ್ಲಿನ ವಿವೇಕದ ಬೆಳಕು ಆಗಾಗ್ಗೆ ಹೊರಹೊಮ್ಮುತ್ತಿದ್ದುದು ಆ ಸಂದೇಶಕ್ಕೆ ಅವು ಸಹಾಯಕವಾಗುತ್ತಿದ್ದ ಸಂದರ್ಭಗಳಲ್ಲಿ ಮಾತ್ರ. ತಮ್ಮ ಅನುಭವದ ಆಧಾರದ ಮೇಲೆ ತಮ್ಮದೇ ಅಭಿಪ್ರಾಯಗಳನ್ನು ಅವರು ಮುಕ್ತವಾಗಿ ಅಭಿವ್ಯಕ್ತಿಗೊಳಿಸುತ್ತಿದ್ದರೇ ಹೊರತು ಯಾವ ಗ್ರಂಥಗಳನ್ನೂ ವಿಶೇಷವಾಗಿ ಕೈಗೆತ್ತಿಕೊಂಡು 'ಪಾಠ' ಮಾಡುತ್ತಿರಲಿಲ್ಲ. ಧೈರ್ಯವಾಗಿ ಭವಿಷ್ಯದೆಡೆಗೆ ಹೊಸದನ್ನು ಅನಾವರಣ ಮಾಡುತ್ತ ಮುನ್ನುಗ್ಗುತ್ತಿದ್ದರೇ ಹೊರತು ಹಳೆಯದರ ಹಿರಿಮೆಯನ್ನೇ ಧೇನಿಸಿಕೊಂಡು ಮೈಮರೆಯುತ್ತಿರಲಿಲ್ಲ. ಹುರುಳಿದ್ದ ಹಳೆಯದು ತಾನಾಗಿಯೇ ಬಂದು ಅವರ ಅಭಿಪ್ರಾಯಗಳಿಗೆ ಬೆಂಬಲ ಕೊಡುತ್ತಿದ್ದಿತು. ಹಳೆಯ ಸಂಪ್ರದಾಯಗಳ ಅಥವಾ ಗ್ರಂಥಗಳ ಪುನರುಜ್ಜೀವನ ಎಂದೂ ಅವರ ಧ್ಯೇಯವಾಗಿರಲಿಲ್ಲ. ಹಾಗೆ ನಾವು ಭಾವಿಸಿದರೆ ಅವರ ಸಂದೇಶದ ಸಾರವನ್ನು, ಅದರ ಓಘವನ್ನು ಕಳೆದುಕೊಳ್ಳಬೇಕಾಗುತ್ತದೆ.

ವಿವೇಕಾನಂದರ ವೈಶಿಷ್ಟ್ಯವೇನೆಂದರೆ, ನಮ್ಮ ಪ್ರಾಚೀನ ಗ್ರಂಥಗಳಲ್ಲಿರುವ ಮೌಲಿಕವಾದದ್ದೆಲ್ಲವೂ ಶ್ರೀರಾಮಕೃಷ್ಣರ ಬೋಧನೆಗಳ ರೂಪದಲ್ಲಿ ಅವರ ಹೃದಯದಲ್ಲಿ ಪ್ರತಿಷ್ಠಾಪಿತವಾಗಿರುವುದು. ಹಿಂದೂ ಧರ್ಮವು—ಏಕೆ, ಅನ್ಯ ಧರ್ಮಗಳೂ ಸಹ—ಶ್ರೀರಾಮಕೃಷ್ಣರ ಜೀವನದಲ್ಲಿ ಅನುಭವವಾಗಿ ಆವಿರ್ಭಾವಗೊಂಡು ಹೊಸದಾಗಿ ನಳನಳಿಸಲಾರಂಭಿಸಿದವು. ಇದನ್ನೇ ವಿವೇಕಾನಂದರು ತಮ್ಮ 'Vedanta in Its Application to Indian Life' (ಭಾರತೀಯರ ಜೀವನಕ್ಕೆ ಅನ್ವಯಿಸುವ ವೇದಾಂತ) ಎಂಬ ಉಪನ್ಯಾಸದಲ್ಲಿ ಸ್ಪಷ್ಟಪಡಿಸುತ್ತಾರೆ: "ಏಕಕಾಲದಲ್ಲಿ ಉಜ್ವಲ ಭಕ್ತ, ಉಜ್ವಲ ಜ್ಞಾನಿ, ದ್ವೈತಿ, ಅದ್ವೈತಿ ಎಲ್ಲವೂ ಆಗಿದ್ದವರೊಬ್ಬರ ಸಹವಾಸದಲ್ಲಿ ಬದುಕುವ ಅವಕಾಶ ನನ್ನದಾಗಿತ್ತು. ಅವರೊಡನೆ ಇದ್ದಾಗ ಮೊದಲು ನನ್ನ ತಲೆಗೆ ಹೋದುದೆಂದರೆ, ನಮ್ಮ ಉಪನಿಷತ್ತುಗಳನ್ನೂ ಶಾಸ್ತ್ರಗ್ರಂಥಗಳನ್ನೂ ಸ್ವತಂತ್ರವಾಗಿ ಅರ್ಥೈಸಿಕೊಳ್ಳುವುದೇ—ವ್ಯಾಖ್ಯಾನಕಾರರನ್ನು ಕುರುಡಾಗಿ ಅನುಸರಿಸುವುದಕ್ಕಿಂತ—ಎಷ್ಟೋ ಒಳ್ಳೆಯದು ಎಂಬುದು". ಹೀಗೆ ಅವರು ವೇದಗಳು, ಉಪನಿಷತ್ತುಗಳು, ಗೀತೆ, ಬ್ರಹ್ಮಸೂತ್ರಗಳು, ಅವುಗಳ ಮೇಲಣ ಮಧ್ಯಯುಗೀನ ಭಾಷ್ಯಗಳು ಎಲ್ಲವನ್ನೂ ತಮ್ಮದೇ ಆದ ದೃಷ್ಟಿಯಿಂದ ನೋಡಿ ಅವುಗಳಲ್ಲಿನ ಸಾರವನ್ನು, ಜೀವಂತಿಕೆಯನ್ನು ತಮ್ಮ ಗುರು ಶ್ರೀರಾಮಕೃಷ್ಣರ ಬದುಕಿನಲ್ಲಿ, ಮಾತುಗಳಲ್ಲಿ, ಹಾಡುಗಳಲ್ಲಿ, ಹಾಸ್ಯಗಳಲ್ಲಿ ಕಂಡುಂಡು ತಮ್ಮದಾಗಿಸಿಕೊಂಡರು. ಅದೇ ಅವರ ಹೊಸ ಕಲ್ಪನೆಗಳ ಕಮ್ಮಟಶಾಲೆಯಾಗಿದ್ದಿತು. ಕೇವಲ ಹಿಂದೂ ಧರ್ಮಗ್ರಂಥಗಳನ್ನಷ್ಟೇ ಅಲ್ಲ, ಇತರ ಧರ್ಮಗಳ ಪವಿತ್ರಗ್ರಂಥಗಳ ಸಾರವನ್ನೂ ಅವರು ಇದೇ ರೀತಿಯಾಗಿ ಗ್ರಹಿಸಿದರು. ಲೋಕದ ಎಲ್ಲ ಧರ್ಮಗಳೂ ಅವನತಿಯ ಹಾದಿಯನ್ನು ಹಿಡಿದಿವೆ; ಮಾನವ ಜನಾಂಗದ ಪುನರುತ್ಥಾನಕ್ಕಾಗಿ ಹೊಸದೊಂದು ವೈಚಾರಿಕ, ಅನುಭವ-ಆಧಾರಿತ, ವಿಶ್ವವ್ಯಾಪೀ ಧ್ಯೇಯಕಲ್ಪನೆ ಇಂದು ಅಗತ್ಯವಾಗಿದೆ ಎಂದು ಅವರಿಗೆ ಅನ್ನಿಸಿತು. ಆ ಆದರ್ಶ, ಆ ಧ್ಯೇಯ ಶ್ರೀರಾಮಕೃಷ್ಣರ ಸಂದೇಶದಲ್ಲಿದೆ ಎಂಬುದೂ ಅವರಿಗೆ ಗೋಚರಿಸಿತು.

ಸುಮಾರು ಮೂರು ದಶಕಗಳ ಹಿಂದೆ ಲಂಡನ್ನಿನ ಸ್ವಾಮಿ ಘನಾನಂದರು ಬರೆದ *Sri Ramakrishna and His Unique Message* (ರಾಮಕೃಷ್ಣರು ಹಾಗೂ ಅವರ ಅದ್ವಿತೀಯ ಸಂದೇಶ) ಎಂಬ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ ಇತಿಹಾಸಕಾರ ಆರ್ನಾಲ್ಡ್ ಟಾಯ್ನ್‌ಬೀ 'ಧರ್ಮವು

ಅಧ್ಯಯನದ ವಸ್ತು ಮಾತ್ರವಲ್ಲ. ಅದು ಅನುಭವಕ್ಕೆ ತಂದು ಕೊಳ್ಳಬೇಕಾದದ್ದು, ಜೀವಿಸಬೇಕಾದದ್ದು. ಈ ಕ್ಷೇತ್ರದಲ್ಲಿ ರಾಮ ಕೃಷ್ಣರು ತಮ್ಮ ಅದ್ವಿತೀಯತೆಯನ್ನು ತೋರ್ಪಡಿಸಿದ್ದಾರೆ" ಎಂದಿದ್ದಾನೆ. ಶ್ರೀರಾಮಕೃಷ್ಣರ ಈ ವೈಶಿಷ್ಟ್ಯವೇ ಅವರ ಶಿಷ್ಯ ವಿವೇಕಾನಂದರ ವೈಶಿಷ್ಟ್ಯವೂ ಆಗಿದೆ. ಆದ್ದರಿಂದ ವಿವೇಕಾನಂದರು ಉಪನಿಷತ್ತುಗಳ ಮೇಲೆ ಹೇಳಿರುವುದನ್ನು ಪರಿಗಣಿಸುವಾಗಲೂ ನಾವು ಈ ಅಂಶವನ್ನು ಮರೆಯಲಾಗದು. ಶ್ರುತಿಯನ್ನು ನಾವು ಅಪೌರುಷೇಯವೆನ್ನುತ್ತೇವೆ, ದೈವವಾಣಿಯೆನ್ನುತ್ತೇವೆ. ಅನುಭವದ ಪಾತಳಿಯಿಂದ ಹೊರಟ ವಿವೇಕಾನಂದರ ವಾಣಿಯೂ ಸಹ ನಮ್ಮನ್ನು ಇದೇ ರೀತಿ ಬಂದು ತಟ್ಟುತ್ತದೆ. ವಿವೇಕಾನಂದರ ಕೃತಿಗಳನ್ನು ಆಧರಿಸಿ ಬರೆದ ಸ್ವಾಮಿ ಚೇತನಾನಂದರ *Vedanta: Voice of Freedom* (ವೇದಾಂತ: ಮುಕ್ತಿವಾಣಿ) ಎಂಬ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ ಅಮೆರಿಕನ್ ದಾರ್ಶನಿಕ ಪ್ರೊ. ಹೂಸ್ಟನ್ ಸ್ಮಿತ್ "ನಾವು ಪದಗಳ ಮೂಲಕ ಅವು ವ್ಯಕ್ತಪಡಿಸುವ ವಿಚಾರಗಳನ್ನು ಆಲಿಸಬಲ್ಲೆವಾದರೆ, ವಿವೇಕಾನಂದರು ಅವುಗಳನ್ನು ಬರೆದವರಲ್ಲ, ಅವುಗಳ ಮುಖವಾಣಿ ಎಂಬುದು ತಿಳಿಯುತ್ತದೆ" ಎಂದಿದ್ದಾರೆ.

ಎಂದ ಮೇಲೆ ನಾವೇಕೆ ಉಪನಿಷತ್ತುಗಳ ಮೇಲೆ ವಿವೇಕಾನಂದರ ಅನಿಸಿಕೆಗಳನ್ನು ಪರಿಗಣಿಸಬೇಕು? ಏಕೆಂದರೆ ಅವರು ಪ್ರಸ್ಥಾನತ್ರಯಗಳೆನಿಸಿದ ಉಪನಿಷತ್ತುಗಳು, ಗೀತೆ ಹಾಗೂ ಬ್ರಹ್ಮಸೂತ್ರಗಳನ್ನು ಒಟ್ಟಾಗಿ ಸಂಶ್ಲೇಷಿಸುತ್ತಾರೆ. ಹೀಗೆ ಮಾಡುವಾಗ ಅವರಿಗೆ ಇತರ ಧರ್ಮಗಳ ಹಾಗೂ ಪಾಶ್ಚಾತ್ಯ ತತ್ತ್ವಜ್ಞಾನದ ಪರಿಚಯವಿದೆ; ವೈಚಾರಿಕತೆ, ವೈಜ್ಞಾನಿಕತೆಗಳಲ್ಲಿ ನಂಬಿಕೆಯಿದೆ; ನವಯುಗದ ಬೌದ್ಧಿಕತೆ ಸಹಜವಾಗಿ ಅಪೇಕ್ಷಿಸುವುದೇನೆಂಬುದೂ ತಿಳಿದಿದೆ. ಆದಕಾರಣ ಅವರು ಉಪನಿಷತ್ತುಗಳನ್ನು ಹೇಗೆ ಪರಿಗಣಿಸಿದ್ದಾರೆ ಎಂಬುದು ಕುತೂಹಲಕಾರಿಯಾಗುತ್ತದೆ.

ಮೊದಲನೆಯದಾಗಿ, ಉಪನಿಷತ್ತುಗಳ ತಾತ್ತ್ವಿಕತೆ ನವಯುಗದ ಮಾನವ ಪುರೋಭಿವೃದ್ಧಿಗೆ ಹೇಗೆ ವಿಧಾಯಕವಾಗುತ್ತದೆ ಎಂಬುದನ್ನು ವಿವೇಕಾನಂದರು ತೋರಿಸಿಕೊಡುತ್ತಾರೆ. ಅನುಭಾವದ ಪಾವಿತ್ರ್ಯಕ್ಕೂ, ಅಭಿವೃದ್ಧಿಯ ಆವಶ್ಯಕತೆಗೂ ಹೊಂದಾಣಿಕೆ ಮಾಡುತ್ತಾರೆ. ಇತಿಹಾಸದ ಒಂದು ಘಟ್ಟದಲ್ಲಿ ಕೊನೆಯ ಸತ್ಯದ ಆವಿಷ್ಕಾರ ಆಗಿಬಿಡುತ್ತದೆ ಎಂದು ಅವರು ಭಾವಿಸುವುದಿಲ್ಲ. ವೇದಗಳ ಕಾಲದ ಅಸಂಖ್ಯ ದೇವ-ದೇವತೆಗಳು ಕ್ರಮೇಣ ತಮ್ಮ ಸ್ಥಳವನ್ನು ದೇವರೊಬ್ಬನೇ ಎಂಬ ಕಲ್ಪನೆಗೆ ಬಿಟ್ಟುಕೊಟ್ಟವು; ಈ ಏಕದೇವಕಲ್ಪನೆಯ ಬೀಜವು ದೇವ-ದೇವತೆಗಳನ್ನು ಪ್ರತಿಪಾದಿಸುವ ಆ ವೇದಗಳಲ್ಲೇ ಇದೆ ಎಂಬುದನ್ನು ಅವರು ತೋರಿಸಿಕೊಟ್ಟರು. ಸತ್ಯೇಂದ್ರನಾಥ ದತ್ತ ಎಂಬ ಬಂಗಾಳಿ ಕವಿ ಹೇಳುವಂತೆ "ವೇದಗಳ ಬೆಳದಿಂಗಳು ಉಪನಿಷತ್ತುಗಳ ಬಾಲಸೂರ್ಯಪ್ರಭೆಯಲ್ಲಿ ಲೀನವಾಯಿತು". ಧರ್ಮವೆಂದರೆ ಈ ಬಾಲಸೂರ್ಯಪ್ರಭೆಯೆಡೆಗೆ ನಾವು ಕೈಕೊಳ್ಳುವ ನಿರಂತರ ಪಯಣ. ೧೯೦೦ರ ಮಾರ್ಚ್ ೨೫ರಂದು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಕೊಟ್ಟ Mohammed (ಮೊಹಮ್ಮದ್) ಎಂಬ ಉಪನ್ಯಾಸದಲ್ಲಿ ವಿವೇಕಾನಂದರು 'ಮಾನವ ಪ್ರಗತಿಯ ಮಹಾಯಾತ್ರೆ'ಯ ಬಗ್ಗೆ ಮಾತನಾಡುತ್ತ, "ಈ ಮಹಾತ್ಮರುಗಳೆಲ್ಲ ದಾರಿಯಲ್ಲಿ ಸಿಕ್ಕುವ ಕೈಮರಗಳಿದ್ದ ಹಾಗೆ. ಅವರು 'ಮುಂದುವರೆಯಿರಿ, ಸೋದರರೆ!' ಎನ್ನುತ್ತಾರೆ; ಆದರೆ ನಾವು ಅವರಿಗೇ ಅಂಟಿಕೊಳ್ಳುತ್ತೇವೆ, ಮುಂದುವರೆಯುವುದಿಲ್ಲ... ಧರ್ಮ ಒಂದು ಸಿದ್ಧಾಂತವಲ್ಲ, ಅದೊಂದು ಪ್ರಕ್ರಿಯೆ!" ಎನ್ನುತ್ತಾರೆ.

೧೯೦೦ರ ಜನವರಿ ೨೮ರಂದು ಕ್ಯಾಲಿಫೋರ್ನಿಯಾದ ಪಸಡೇನದಲ್ಲಿ ಕೊಟ್ಟ The Way to the Realisation of a Universal Religion (ವಿಶ್ವಧರ್ಮವನ್ನು ಸಾಕ್ಷಾತ್ಕರಿಸುವ ಮಾರ್ಗ) ಎಂಬ ಉಪನ್ಯಾಸದಲ್ಲಿ ಸ್ವಾಮಿ ವಿವೇಕಾನಂದರು "ಅಭಿವೃದ್ಧಿ, ವಿಕಾಸ ಎಂದು ನಾವು ಕರೆಯುವುದೆಲ್ಲವೂ ಆ ದೇವರೆಂಬ ಒಂದು ಮಾನವಧ್ಯೇಯದ ಅರಸುವಿಕೆಯಷ್ಟೆ" ಎಂದರು; Universal Religion (ವಿಶ್ವಧರ್ಮ) ಎಂಬ ಉಪನ್ಯಾಸದಲ್ಲಿ "ಒಂದೊಂದೂ ಅದ್ಭುತ ಕಲ್ಪನೆಯಿಂದ ಕೂಡಿದ ವ್ಯವಸ್ಥೆಗಳು ಒಂದಾದಮೇಲೆ ಒಂದು ಹುಟ್ಟಿ ಬರುತ್ತವೆ; ಆದರ್ಶಗಳು ಒಂದರ ಮೇಲೊಂದು ಪೇರಿಸಲ್ಪಡುತ್ತವೆ—ಇದೇ ಮಾನವನ ಮುನ್ನಡೆ. ಮಾನವ ಮುನ್ನಡೆಯುವುದು ತಪ್ಪಿನಿಂದ ಒಪ್ಪಿಗಲ್ಲ, ಸತ್ಯದಿಂದ ಸತ್ಯಕ್ಕೆ, ಅಲ್ಪಸತ್ಯದಿಂದ ಮಹಾಸತ್ಯದೆಡೆಗೆ; ಆದರೆ ಅನೃತದಿಂದ ಋತದೆಡೆಗಲ್ಲ" ಎಂದಿದ್ದಾರೆ. ಮಾನವ ಚಿಂತನೆಯ ಈ ಸಮೃದ್ಧಿ, ಈ ವೈವಿಧ್ಯ, ಈ ನಿರಂತರತೆಗಳೇ ಅವರಿಗೆ ತನ್ನ ಆಧ್ಯಾತ್ಮಿಕ ಪರಂಪರೆಯ ಮೂಲಭೂತ ಅಂಶಗಳನ್ನು ತಾನೂ ಒಂದು ಹೊಸ ಕಲ್ಪನೆಯಾಗಿ ಪಾಶ್ಚಾತ್ಯ ಲೋಕದೆದುರು ಮಂಡಿಸಬೇಕೆಂಬ ಸ್ಫೂರ್ತಿಯನ್ನು ನೀಡಿದುವು.

ನಮ್ಮ ಜನರ ಆಧ್ಯಾತ್ಮಿಕ ಇತಿಹಾಸದಲ್ಲಿರುವ ಈ ಚಲನಶೀಲತೆ ವಿವೇಕಾನಂದರನ್ನು ಉಪನಿಷತ್ತುಗಳ ಕಡೆಗೆ ಶ್ರೀರಾಮಕೃಷ್ಣರ ಹೊಸ ದೃಷ್ಟಿಯಿಂದ ನೋಡುವಂತೆ ಮಾಡಿತು. The Vedanta in All Its Phases (ಸ್ಥಿತ್ಯಂತರಗಳಲ್ಲಿ ವೇದಾಂತ) ಎಂಬ ಉಪನ್ಯಾಸದಲ್ಲಿ ಅವರೆನ್ನುತ್ತಾರೆ: "ಯಾರ ಜೀವನವು ಉಪನಿಷತ್ತುಗಳ ಭಾವವೇ ಮಾನವರೂಪಿನಲ್ಲಿ ಬಂದಂತಿದ್ದಿತೋ, ಉಪನಿಷತ್ತುಗಳಿಗೆ ಜೀವಂತ ಭಾಷ್ಯವಾಗಿದ್ದಿತೋ, ಬೋಧನೆಗಿಂತಲೂ ಸಾವಿರಪಟ್ಟು ಮಿಗಿಲಾದುದಾಗಿದ್ದಿತೋ, ಅಂಥ ಒಬ್ಬರ ಪಾದಮೂಲದಲ್ಲಿ ಕುಳಿತು ಕಲಿಯುವ ಅದೃಷ್ಟವು ನನಗೆ ಭಗವತ್ಕೃಪೆಯಿಂದ ಲಭಿಸಿತು; ಬಹುಶಃ ಆ ಸಮನ್ವಯದ ಅಲ್ಪಾಂಶ ನನಗೂ ಬಂದಿದ್ದಿರಬಹುದು."

(ಮುಂದುವರಿಯುವುದು)